## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

## ನಾಡ ಕಛೇರಿ ಪ್ರಾರಂಭದ ಬಗ್ಗೆ.

೧೫೮೮. ಶ್ರೀ ಎಂ. ವರದೇಗೌಡ(ಚನ್ನಪಟ್ಟಣ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೮-೮೯ನೇ ಸಾಲಿನಲ್ಲಿ ರಾಜ್ಯದಲ್ಲಿ ೩೭೪ ನಾಡ ಕಛೇರಿಗಳನ್ನು ಪ್ರಾರಂಭಿಸಲು ೫ ಕೋಟಿ ರೂಪಾಯಿಗಳನ್ನು ತೆಗೆದಿರುಸುವುದಾಗಿ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ಸೂಚನೆ ಮಾಡಿರುವುದು ನಿಜವೇ ?

ಆ) ೧೯೮೭-೮೮ನೇ ಸಾಲಿನಲ್ಲಿ ಯೋಜನೆ ಹಾಕಿಕೊಂಡಿದ್ದ ಪ್ರಕಾರ ನಾಡ ಕಛೇರಿಗಳನ್ನು ಇದುವರೆವಿಗೂ ಪ್ರಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ೧೯೮೭-೮೮ ಮತ್ತು ೧೯೮೮-೮೯ನೇ ಸಾಲಿನಲ್ಲಿ ತೆರೆಯಬೇಕೆಂದು ಉದ್ದೇಶಿಸಲಾಗಿರುವ ನಾಡ ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮತ್ತು ಯೋಜನ ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.

ಇ) ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳಲಾಗುವುದು.

## ಉಪಹಾರ ಕೇಂದ್ರಗಳನ್ನು ಅಂಗನವಾಡಿಗಳಾಗಿ ಪರಿವರ್ತಿಸುವುದು.

೧೭೩೮. ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಿಗಿಂತ ಉಪಹಾರ ಕೇಂದ್ರಗಳಿಗೆ ಕಡಿಮೆ ಆಹಾರ ಸಾಮಗ್ರಿಗಳು ಪೂರೈಕೆ ಆಗುತ್ತಿರುವುದು ನಿಜವೆ ?

೨) ಗ್ರಾಮೀಣ ಪ್ರದೇಶದಲ್ಲಿ ತಾರತಮ್ಯ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೩) ಹಾಗಿದ್ದಲ್ಲಿ ತಾರತಮ್ಯವನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವರೆ ?

೪) ಉಪಹಾರ ಕೇಂದ್ರಗಳನ್ನು ಅಂಗನವಾಡಿ ಕೇಂದ್ರಗಳಾಗಿ ಪರಿವರ್ತಿಸುವ ಯೋಜನೆಯೇನಾದರು ಇದೆಯೇ ?

ಶ್ರೀ ಜಿ. ಬಸವಣ್ಣಪ್ಪ(ಸಮಾಜ ಕಲ್ಯಾಣ ಸಚಿವರು).—

೧) ಅಂಗನವಾಡಿ ಕೇಂದ್ರಗಳಿಗೂ ಹಾಗೂ ಉಪಹಾರ ಕೇಂದ್ರಗಳಿಗೂ ಕೊಡುವ ಆಹಾರ ಬೇರೆ ಬೇರೆ ರೀತಿಯದ್ದಾಗಿದೆ. ಉಪಹಾರ ಕೇಂದ್ರಗಳಲ್ಲಿ ಗೋಧಿಯಿಂದ ತಯಾರಿಸಿದ ಏಕರೂಪದ ಆಹಾರವನ್ನು ಕೊಡಲಾಗುವುದು. ಅಂಗನವಾಡಿ ಕೇಂದ್ರಗಳಲ್ಲಿ ೨ ದಿವಸ ಧಾಲಿಯಾದಿಂದ ತಯಾರಿಸಿದ ೨ ದಿವಸ ಅಕ್ಕಿಯಿಂದ ತಯಾರಿಸಿದ ಹಾಗೂ ೨ ದಿವಸ ಪೌಷ್ಟಿಕ ಆಹಾರವನ್ನು ವಿತರಿಸಲಾಗುವುದು.

೨) ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಇದೇ ರೀತಿ ಪೂರೈಸಲಾಗುತ್ತಿದೆ.

೩) ಪೌಷ್ಟಿಕ ಆಹಾರವನ್ನು ಕೊಡುವ ವಿಧಾನ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಇದೆ.

೪) ಇಲ್ಲ.